ಓ.ಎಸ್. ನಂಃ 32/2019
ಪಿ.ಡಬ್ಲ್ಯೂಃ1, ಅಶೋಕ

ದಿನಾಂಕ :06.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಪಾಟಿ ಸವಾಲು :- ಶ್ರೀ ಜೆ ಎ ಎಮ್ ವಕೀಲರಿಂದ

ಪ್ರತಿವಾದಿಯು ನನಗೆ 1975 ರಿಂದ ಪರಿಚಯ. ಅವರು ನನ್ನ ಕಾಲೇಜಿನ ಸಹಪಾಠಿ. ನಾನು ಈಗ ಸಧ್ಯ ವ್ಯವಸಾಯ ಮಾಡುತ್ತೇನೆ. ಸನ್ 2014 ರಲ್ಲಿಯೂ ಸಹ ವ್ಯವಸಾಯ ಮಾಡುತ್ತಿದ್ದೆ, ಮೊದಲಿನಿಂದಲೂ ವ್ಯವಸಾಯ ಮಾಡುತ್ತಿದ್ದೇನೆ. ವ್ಯವಸಾಯ ಬಿಟ್ಟು ನಾನು ಸಾಲ ಕೊಡುವುದು, ಲೇವಾದೇವಿ ವ್ಯವಹಾರ ಮಾಡಿಲ್ಲಾ. ನಾನು ಯಾವುದೇ ಫೈನಾನ್ಸ ನಡೆಸಿಲ್ಲಾ. ಪ್ರತಿವಾದಿಯೂ ಮೊದಲು ಗೀತಾ ಫೈನಾನ್ಸ ನಡೆಸುತ್ತಿದ್ದ ಆ ನಂತರ ಬಾಲಾಜಿ ಟೇಡರ್ಸ್ ವ್ಯವಹಾರ ಮಾಡುತ್ತಿದ್ದರು. ಗೃಹಉಪಯೋಗಿ ವಸ್ತಗಳ ವ್ಯಾಪಾರ ಮಾಡುತ್ತಿದ್ದರು. ಪ್ರತಿವಾದಿಯು ಫೈನಾನ್ಸ ಅಲ್ಲದೇ ಬಿಸಿ ವ್ಯವಹಾರ ಸಹ ಮಾಡುತ್ತಿದ್ದರು. ಸದರಿ ಪ್ರತಿವಾದಿ ನಡೆಸುತ್ತಿದ್ದ ಫೈನಾನ್ಸ, ಬಿ ಸಿ ಮತ್ತು ಬಾಲಾಜಿ ಟ್ರೇಡರ್ಸನಲ್ಲಿ ನಾನು ಯಾವುದೇ ರೀತಿ ಪಾಲುದಾರನಾಗಿರಲಿಲ್ಲಾ.

ನಾನು ಪ್ರತಿವಾದಿಗೆ ಕೊಟ್ಟಿರುವ ರೂ. 8 ಲಕ್ಷ 77 ಸಾವಿರ ಹಣ ಎಲ್ಲವೂ ಸಹ ನನ್ನ ವ್ವವಸಾಯದ ಆದಾಯದಿಂದ ಕೊಟ್ಟಿರುತ್ತೇನೆ. ಅದೇ ರೀತಿ ನಾನು 2 - 3 ಅಂಗಡಿ ಹೊಂದಿದ್ದು ಅದರ ಬಾಡಿಗೆ ಬರುತ್ತಿದ್ದು ಅದರಿಂದಲೂ ಸಹ ಕೊಟಿದ್ದೇನೆ ಎಂದು ಹೇಳುತ್ತಾರೆ. ನಾನು ಈ ರೀತಿ ಆದಾಯ ಹೊಂದಿದ ಬಗ್ಗೆ ಆದಾಯ ತೆರಿಗೆ ಪಾವತಿ ಮಾಡಿಲ್ಲಾ ಯಾವುದೇ ದಾಖಲೆ ಹೊಂದಿಲ್ಲಾ . ಪ್ರತಿವಾದಿಗೆ ಕೊಟ್ಟ ಹಣದ ಬಗ್ಗೆ ಯಾವ ಆದಾಯ ಬಂದಿತ್ತು ಎಂದು ತೋರಿಸಲು ಲೆಕ್ಕ ಪತ್ರ ಇಟ್ಟಿಲ್ಲಾ ಆದರೆ ವ್ಯವಸಾಯದ ಉತ್ವನ್ನಗಳನ್ನು ಮಾರಿದ ನಂತರ ಬಂದ ಹಣದಿಂದ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ದಿ: 4-6-2014 ರಂದು ರೂ. 3 ಲಕ್ಷ ಕೊಟ್ಟಾಗ ಪ್ರತಿವಾದಿಯು ಪ್ರೋನೋಟ್ ಬರೆದುಕೊಟಿದ್ದಾರೆ ಎಂದು ಹೇಳಿದ್ದೇನೆ ಎಂದರೆ ಸರಿ. ನಿಪಿ-1 ಸದರಿ ಪ್ರೋನೋಟ್ ಆಗಿದ್ದು ಅದರಲ್ಲಿ ಇರುವ ಬರವಣಿಗೆ ಪ್ರತಿವಾದಿಯದ್ದು ಎಂದು ಹೇಳುತ್ತಾರೆ. ನಿಪಿ-1 ರಲ್ಲಿ ಬರೆದ ಅಂಶಗಳು ಸರಿ ಇರುತ್ತವೆ.

ನಿಪಿ-1 ಬರೆದಾಗ ಪ್ರತಿವಾದಿ ಮತ್ತು ಅವರ ಸಹಾಯಕ ಇದ್ದರು. ನಿಪಿ -1 ರಲ್ಲಿ ಸಾಕ್ಷಿಗೆ ಎರಡು ಸಹಿಗಳನ್ನು ತೋರಿಸಿದ್ದು ಅದು ಎರಡು ಸಹಿಗಳು ಪ್ರತಿವಾದಿಯ ಸಹಿ ಎಂದು ಹೇಳುತ್ತಾರೆ. ಸಾಕ್ಷಿಗೆ ಅದೇ ದಾಖಲೆಯಲ್ಲಿ ಸಾಕ್ಷಿಯಾಗಿ ಸಹಿ ಮಾಡಿದ್ದು ಯಾರು ಎಂದರೆ ಸಾಕ್ಷಿ ಅದು ಗೊತ್ತಿಲ್ಲಾ ಎಂದು ಹೇಳುತ್ತಾರೆ ಸಾಕ್ಷಿ ಪುನ: ನೆನಪು ಇಲ್ಲಾ ಎಂದು ಹೇಳುತ್ತಾರೆ. ಅದೇ ರೀತಿ ದಿ: 6-9-2014 ರಂದು ಪ್ರತಿವಾದಿ ರೂ.1 ಲಕ್ಷ ಹಣ ಪಡೆದು ಪ್ರೋನೋಟ್ ಬರೆದು

ಕೊಟ್ಟಿದ್ದಾರೆ ಎಂದು ಹೇಳಿದ್ದೇನೆ ಎಂದರೆ ಸರಿ. ಅದೇ ರೀತಿ ನಿಪಿ-2 ರಲ್ಲಿ ಸಹ ಬರೆದ ಅಂಶಗಳು ಎಲ್ಲಾ ಸರಿ ಇರುತ್ತವೆ ಅದರಲ್ಲಿ ಪ್ರತಿವಾದಿ ಸೆಕ್ಯೂರಟಿ ಎಂದು ಬರೆದುಕೊಟ್ಟಿದಾರೆ ಎಂದು ಹೇಳುತ್ತಾರೆ. ಅದರಲ್ಲಿ ಇರುವ ಸಹಿಗಳು ಪ್ರತಿವಾದಿ ಸಹಿಗಳು ಅಲ್ಲಾ ಎನ್ನುವುದ ಸರಿಯಲ್ಲ. ಅದೇ ರೀತಿ ದಿ: 30-9-2014 ರಂದು ಪ್ರತಿವಾದಿ ರೂ.1 ಲಕ್ಷ 77 ಸಾವಿರ ಹಣ ಪಡೆದು ಪ್ರೋನೋಟ್ ಬರೆದು ಕೊಟ್ಟಿದ್ದಾರೆ ಎಂದು ಹೇಳಿದ್ದೇನೆ ಎಂದರೆ ಸರಿ. ಅದೇ ರೀತಿ ನಿಪಿ-3 ರಲ್ಲಿ ಸಹ ಬರೆದ ಅಂಶಗಳು ಎಲ್ಲಾ ಸರಿ ಇರುತ್ತವೆ. ಅದರಲ್ಲಿ ಪ್ರತಿವಾದಿ ಸೆಕ್ಯೂರಟಿ ಎಂದು ಬರೆದುಕೊಟ್ಟಿದಾರೆ ಎಂದು ಹೇಳುತ್ತಾರೆ. ಅದರಲ್ಲಿ ಇರುವ ಸಹಿಗಳು ಪ್ರತಿವಾದಿ ಸಹಿಗಳು ಅಲ್ಲಾ ಎನ್ನುವುದು ಸರಿಯಲ್ಲ. ಈ ಮೂರು ಪ್ರೋನೋಟ್ ಮೊತ್ತ ಸೇರಿಸಿದಾಗ ಒಟ್ಟು ರೂ. 5 ಲಕ್ಷ 77 ಸಾವಿರ ಹಣ ಆಗುತ್ತ ದೆ ಎಂದು ಹೇಳುವುದು ಸರಿ. ಈ ಹಣವನ್ನು ಪ್ರತಿವಾದಿ ನನಗೆ ವಾಪಸ ಕೊಟ್ಟಿಲ್ಲಾ. ಹಣ ತೆಗೆದುಕೊಂಡ ನಂತರ ಇವತ್ತಿನವರೆಗೂ ಅವರು ಹಣವನ್ನು ವಾಪಸ್ಸು ಕೊಟ್ಟಿಲ್ಲಾ ಊರು ಬಿಟ್ಟು ಹೋಗಿದ್ದರು ಎಂದು ಹೇಳುತ್ತಾರೆ.

ಈ ಪ್ರೋನೋಟ್ ಮೂಲಕ ಹಣ ಕೊಟ್ಟ ನಂತರ ನನಗೂ ಹಾಗೂ ಪ್ರತಿವಾದಿಗೆ ಸಂಪರ್ಕ ಇರಲಿಲ್ಲಾ ಎಂದು ಹೇಳುವುದು ಸರಿ. ನಾನು ಪ್ರತಿವಾದಿ ನಡೆಸುತ್ತಿದ್ದ ಬಾಲಾಜಿ ಟೇಡರ್ಸ ನಲ್ಲಿ ಮನೆ ಸಾಮಾನು ಖರಿದಿ ಮಾಡುವುದು ವ್ಯವಹಾರ ಮಾಡುತ್ತಿರಲಿಲ್ಲಾ. ಸಾಕ್ಷಿಗೆ ಪ್ರೋನೋಟ ಬರೆದುಕೊಟ್ಟ ನಂತರ ನನಗೂ ಪ್ರತಿವಾದಿಗೂ ಸಂಪರ್ಕ ಇರಲಿಲ್ಲಾ ಎಂದು ಹೇಳಿದ್ದು ಆದರೂ ಸಹ ನಿಪಿ-4 ಚೆಕ್ ಪ್ರತಿವಾದಿಯಿಂದ ಹೇಗೆ ಪಡೆದಿದ್ದಾರಾ ಎಂದು ಕೇಳಿದಕ್ಕೆ ಸಾಕ್ಷಿ ಅವರು ಊರು ಬಿಟ್ಟು ಹೋಗುವ ಮೊದಲು ಕೊಟ್ಟಿದ್ದರು ಎಂದು ಹೇಳುತ್ತಾರೆ. ಸದರಿ ಚೆಕ್ ನ್ನು ಪ್ರತಿವಾದಿ ಸಹಿ ಮಾಡಿ ಬರೆದುಕೊಟ್ಟಿದ್ದರು. ಚೆಕ್ ಮೇಲೆ 12.05.2017 ಎಂದು ದಿನಾಂಕ ಇದೆ ಎಂದರೆ ಸರಿ. ಸದರಿ ಚೆಕ್ನು ಪ್ರತಿವಾದಿ ಕೊಟ್ಟಿಲ್ಲಾ ನಾನು ಅವರಿಗೆ ಗೊತ್ತಿಲ್ಲದ ಹಾಗೆ ಚೆಕ್ ಲೀಪ್ ನ್ನು ತೆಗೆದುಕೊಂಡು ದುರ್ಬಳಕೆ ಮಾಡಿಕೊಂಡಿದ್ದೇನೆ ಎಂದರೆ ಸಾಕ್ಷಿ ಇಲ್ಲಾ ಎಂದು ಹೇಳುತ್ತಾರೆ. ಸದರಿ ಚೆಕ್ಕು ಶ್ರೀ ಬಾಲಾಜಿ ಏಜೆನ್ಸಿ ಹೆಸರಿನಲ್ಲಿ ಎಸ್ ಬಿ ಎಚ್ ಬ್ಯಾಂಕನಲ್ಲಿ ಇದೆ ಎಂದರೆ ಹೌದು ಎಂದು ಹೇಳುತ್ತಾರೆ. ನಿಪಿ-4 ಚೆಕ್ಕು ಪ್ರತಿವಾದಿ ಕೊಟ್ಟ ಚೆಕ್ ಎಂದು ಹೇಳುತ್ತಾರೆ. ಚೆಕ ಸಂಖ್ಯೆ: 658884 ಮತ್ತು ಚೆಕ್ ಸಂಖ್ಯೆ: 658886 ಇವುಗಳನ್ನು ಪ್ರತಿವಾದಿಯು 2-6-2014 ಮತ್ತು 5-6-2014 ರಂದು ಬಳಸಿದ್ದು ಆದ ಕಾರಣ ನಾನು ಹಾಜರು ಪಡಿಸಿರುವ ನಿಪಿ-4 ಚೆಕ್ಕು ಮಿಸ್ಸ ಆಗಿದ್ದು ಅದನ್ನು ದುರ್ಬಳಕೆ ಮಾಡಿ ಹಾಕಿದ್ದೇನೆ ಎಂದರೆ ಸಾಕ್ಷಿ ಪ್ರತಿವಾದಿ ಯಾವ ಚೆಕ್ ಕೊಟ್ಟರೋ ಆ ಚಕ್ ಹಾಕಿದ್ದೇನೆ ಎಂದು ಹೇಳುತ್ತಾರೆ. ನಿಪಿ -4- ಚಕೆ ಯಾವ ತಾರೀಖು ಕೊಟ್ಟಿದ್ದರು ಎಂದರೆ ಸಾಕ್ಷಿ ತಾರೀಖು ಹೇಳಲು ಆಗುವುದಿಲ್ಲಾ ಸಾಕ್ಷಿ ಚೆಕ್ನಲ್ಲಿ ಬರೆದ ದಿನಾಂಕದಂದೆ ಕೊಟ್ಟಿದ್ದರು ಎಂದು ಹೇಳುತ್ತಾರೆ.

ಓ.ಎಸ್. ನಂಃ **32/2019**
ಪಿ.ಡಬ್ಲ್ಯೂಃ**1,** ಅಶೋಕ

ನಾನು ಸದರಿ ಚೆಕನ್ನು ಎಷ್ಟು ದಿನಗಳ ನಂತರ ಬ್ಯಾಂಕಿಗೆ ಹಾಕಿದ್ದೆ ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲಾ ದಾಖಲೆ ಹಾಕಿದ್ದೇನೆ ಎಂದು ಹೇಳುತ್ತಾರೆ. ನಿಪಿ-4- ರಲ್ಲಿ ಇರುವ ಸಹಿ ಪ್ರತಿವಾದಿಯ ಸಹಿ ಅಲ್ಲಾ ಎಂದರೆ ಸರಿಯಲ್ಲ.

ಪ್ರತಿವಾದಿಯು ನನಗೆ ಯಾವದೇ ಪ್ರೋನೋಟ್ ಬರೆದುಕೊಟ್ಟಿಲ್ಲಾ, ಸೆಕ್ಯೂರಿಟಿ ಬರೆದುಕೊಟ್ಟಿಲ್ಲಾ, ಚೆಕ್ ನೀಡಿಲ್ಲಾ ಈ ಎಲ್ಲಾ ದಾಖಲೆಗಳು ನಾನೇ ಸೃಷ್ಟಿಸಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿ ನಡೆಸುತ್ತಿದ್ದ ಬಾಲಾಜಿ ಟೇಡರ್ಸ್ ನಲ್ಲಿ ಉದ್ರಿ ಮೇಲೆ ಸಾಮಾನು ತೆಗೆದುಕೊಂಡು ಹೋಗುತ್ತಿದ್ದೇ ಎಂದು ಸೂಚಿಸುವುದ ಸರಿಯಲ್ಲ. ನಾನು ಅವರಿಗೆ ಕೊಡಬೇಕಾದ ಬಾಕಿ ಕೊಡದೇ ಇದ್ದಾಗ ಅವರು ಕೇಳಿದ್ದಕ್ಕೆ ಸಿಟ್ಟಿನಿಂದ ಅವರ ವಿರುದ್ಧ ದ್ವೇಷ ಸಾಧಿಸಲು ಪ್ರೋನೋಟ್ ದಾಖಲೆಗಳನ್ನು ಸೃಷ್ಟಿಸಿ ಚೆಕ್ನುನ್ನು ದುಬರ್ಳಕೆ ಮಾಡಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೇನೆಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಅಷ್ಟೊಂದು ದೊಡ್ಡ ಹಣ ಕೊಟ್ಟ ಬಗ್ಗೆ ಪ್ರೋನೊಟ್ ಹಾಗೂ ಚೆಕ್ ಬಿಟ್ಟು ಬೇರೆ ಯಾವುದೇ ದಾಖಲೆ ಬರೆಸಿಕೊಂಡಿಲ್ಲಾ. ನಿಪಿ-1 ರಿಂದ 4 ರಲ್ಲಿರುವ ಸಹಿಗಳು ಪ್ರತಿವಾದಿಯ ಸಹಿಗಳಲ್ಲ ಎನ್ನುವುದು ಸರಿಯಲ್ಲ. ಬಾಲಾಜಿ ಟೇಡರ್ಸ ವ್ಯವಹಾರ ಹಣ ವಾಪಸು ಕೊಡಬೇಕು ಎಂದು ದುರದ್ದೇಶದಿಂದ ಪ್ರೋನೋಟ ದಾಖಲೆ ಸೃಷ್ಟಿಸಿ ಚಕೆ ದುಬರ್ಳಕೆ ಮಾಡಿ ಸುಳ್ಳು ದಾವೇ ಹಾಕಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಯು ನನಗೆ ಯಾವುದೇ ಹಣ ಕೊಡುವುದು ಇಲ್ಲಾ ನಾನೇ ಅವರಿಗೆ ಹಣ ವಾಪಸ ಕೊಡಬೇಕು ಎಂದು ಹೇಳುವುದು ಸರಿಯಲ್ಲ. ನಾನು ಇಲ್ಲಿ ರೂ. 8 ಲಕ್ಷ 77 ಸಾವಿರ ರೂಪಯಿಗೆ ದಾವೆ ಹಾಕಿದ್ದು ಆದರೆ ಜೆ ಎಮ್ ಎಫ್ ಸಿ ನ್ಯಾಯಾಲಯದಲ್ಲಿ ಹಾಕಿದ ಚೀಟಿಂಗ ಕೇಸನಲ್ಲಿ ರೂ. 12 ಲಕ್ಷ ರೂಪಾಯಿಗೆ ಹಾಕಿದ್ದೇನೆ ಎಂದರೆ ಸಾಕ್ಷಿ ಅದರಲ್ಲಿ ವಕಲಾತ ಫೀ ಎಲ್ಲಾ ಸೇರಿ ರೂ. 12 ಲಕ್ಷ ಕೇಳಿದ್ದೇನೆ ಎಂದು ಹೇಳುತ್ತಾರೆ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ದಾವೆ ಹಾಕಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲಾ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.